OS No. 49/2022

DW-1

**(ಇಂದು ದಿಃ 06-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಪಾಟೀ ಸವಾಲುಃ- ವಾದಿ ಪರ ಶ್ರೀ. ವಿ ಜೆ ಎಮ್ ವಕೀಲರಿಂದಃ-**

1. ನಾನು ವಾದಿಯನ್ನು ನೋಡಿದರೆ ಗುರುತಿಸುತ್ತೇನೆ. ಕಳೆದ 20 ವರ್ಷಗಳಿಂದ ವಾದಿ ನನಗೆ ಪರಿಚಯ. ನನ್ನ ಹೆಂಡತಿ ವಾದಿಪರ ದಿಃ29-05-2014ರಂದು ದಾವಾ ಸ್ವತ್ತಿನ ಸಂಬಂಧ ಕ್ರಯ ಕರಾರು ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿ. ಕ್ರಯ ಪತ್ರ ನೊಂದಣಿಗೆ ಬೇಕಾಗುವ ಸ್ಕೆಚ್, ಫಾರಂ ನಂಬರ-10 ಮತ್ತು ಇತರ ದಾಖಲಾತಿಗಳನ್ನು ನಾನು ಪಡೆದುಕೊಂಡು ಖರೀದಿ ಪತ್ರ ಬರೆದುಕೊಡಬೇಕೆಂದು ಅಗ್ರಿಮೆಂಟ್‌ನಲ್ಲಿ ಒಪ್ಪಂದ ಆಗಿತ್ತು ಎಂದರೆ ಸರಿ. ನಾನು ವಾದಿಗೆ ಅಗ್ರಿಮೆಂಟ್ ಬರೆಕೊಟ್ಟ ನಂತರ ಕೇಂದ್ರ ಸರ್ಕಾರ ರೂಪಾಯಿ 500 ಮತ್ತು 1000 ರೂಪಾಯಿ ಮುಖಬೆಲೆಯ ನೋಟುಗಳ ಚಲಾವಣೆಯನ್ನು ನಿಲ್ಲಿಸಿತು ಎಂದರೆ ಸರಿ. ಆ ಸಮಯದಲ್ಲಿ ಎಲ್ಲರಿಗೂ ಹಣದ ಕೊರತೆ ಇತ್ತು , ಕಾರಣ ವಾದಿ 1ನೇ ಪ್ರತಿವಾದಿಗೆ ಬಾಕಿ ಹಣ ಕೊಟ್ಟು ಖರೀದಿ ಪತ್ರ ಮಾಡಿಕೊಳ್ಳಲು ಆಗಲಿಲ್ಲ ಎಂದರೆ ಸರಿ. ತದನಂತರ ದೇಶದಲ್ಲಿ ಕೋವಿಡ್ ಕಾಯಿಲೆ ಬಂತ್ತು ಎಂದರೆ ಸರಿ. ನಾನು ಆಗಲಿ ಹಾಗೂ ನನ್ನ ಹೆಂಡತಿ ಆಗಲಿ ವಾದಿಗೆ ಸ್ಕೆಚ್, ಫಾರಂ-10 ಮತ್ತು ಇತರೆ ದಾಖಲಾತಿ ಕೊಟ್ಟಿಲ್ಲ. ಕೋವಿಡ್ ಕಾರಣಕ್ಕೆ ಮತ್ತು ವಾದಿ ಇನ್ನೂ 5 ಲಕ್ಷ ಹಣ ಕೊಡಬೇಕಾಗಿತ್ತು, ಕಾರಣ ದಾಖಲಾತಿ ಕೊಟ್ಟಿಲ್ಲ. ಇವತ್ತಿಗೂ ವಾದಿ 1ನೇ ಪ್ರತಿವಾದಿಗೆ ಬಾಕಿ ಹಣ ಕೊಟ್ಟು ನೊಂದಾಯಿತ ಖರೀದಿ ಪತ್ರ ಬರೆಯಿಸಿಕೊಳ್ಳಲು ಸಿದ್ಧರಿದ್ದಾರೆ ಎಂದರೆ ಸರಿ. ಹಾಗಿದ್ದರು ನಾನು ಮತ್ತು ನನ್ನ ಹೆಂಡತಿ ಯಾವುದೇ ಕಾರಣ ಇಲ್ಲದೇ ವಾದಿಗೆ ಖರೀದಿ ಪತ್ರ ಬರೆದು ಕೊಡುತ್ತಿಲ್ಲ ಎಂದರೆ ಸರಿಯಲ್ಲ.

2. ನಾನು ಮತ್ತು ನನ್ನ ಹೆಂಡತಿ ವಾದಿಗೆ ಅಗ್ರಿಮೆಂಟ್ ಬರೆಕೊಟ್ಟ ನಂತರ 2ನೇ ಪ್ರತಿವಾದಿಗೆ ಖರೀದಿ ಪತ್ರ ಬರೆದುಕೊಟ್ಟಿದ್ದೇವೆ ಎಂದರೆ ಸರಿ. 2ನೇ ಪ್ರತಿವಾದಿಗೆ ಜಮೀನು ಮಾರಾಟ ಮಾಡುವಾಗ ಮಾರಾಟದ ಬಗ್ಗೆ ವಾದಿಗೆ ತಿಳಿಸಿಲ್ಲ ಎಂದರೆ ಸರಿ. ವಾದಿ ನನ್ನ ಹೆಂಡತಿಗೆ ಮುಂಗಡವಾಗಿ ಕೊಟ್ಟಿದ್ದ ಹಣ ದಕ್ಕಿಸಿಕೊಳ್ಳಬೇಕೆಂದು ನಾನು ಮತ್ತು ಪ್ರತಿವಾದಿಯರು ಶರೀಕಾಗಿ ಖರೀದಿ ಪತ್ರ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ.

OS No. 49/2022

DW-1

**(2ನೇ ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲಿಗೆ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**

**ಸೇಡಂ.**